2ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,
ರಾಮನಗರ, ಕನಕಪುರದಲ್ಲಿ.

**ಎಸ್.ಸಿ.5048/2024**

ದಿಃ20.02.2025
ಚಾಸಾ-3 ಪ್ರಾಸಾ-1

| | |
|---|---|
| ಹೆಸರು | : ವೆಂಕಟೇಶ್ |
| ತಂದೆಯ ಹೆಸರು | : ತಿಮ್ಮಯ್ಯ |
| ವಯಸ್ಸು | : 39 |
| ಉದ್ಯೋಗ | : ಕೂಲಿ ಕೆಲಸ |
| ವಾಸ | : ಮಾದವನಗರ, ಕುರುಪೇಟೆ |

**(ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು)**
**ಮುಖ್ಯವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ**

ಸಾಕ್ಷಿಯು ದಿಃ21.01.2024ರಂದು ಜರುಗಿಸಿದ ದಾಳಿ ಮಹಜರ್ ಮತ್ತು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-1, 1(ಎ) ಎಂದು ಗುರುತಿಸಲಾಯಿತು. ಸುಮಾರು ಒಂದು ವರ್ಷದ ಹಿಂದೆ ಕನಕಪುರ ಟೌನ್ ಪೊಲೀಸರ ಸೂಚನೆ ಮೇರೆಗೆ ಪೊಲೀಸ್ ಠಾಣೆಯಲ್ಲಿ ನಿಪಿ-1ಕ್ಕೆ ಸಹಿ ಮಾಡಿರುತ್ತೇನೆ. ನಿಪಿ-1ರಲ್ಲಿ ಬರೆದಿರುವ ಸಂಗತಿಗಳು ನನಗೆ ತಿಳಿದಿರುವುದಿಲ್ಲ. ಪೊಲೀಸರು ನನ್ನನ್ನು ಬೇರೆ ಯಾವುದೇ ಸ್ಥಳಕ್ಕೆ ಕರೆದುಕೊಂಡು ಹೋಗಿರುವುದಿಲ್ಲ. ಪೊಲೀಸರು ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ಅಮಾನತುಪಡಿಸಿಕೊಂಡಿರುವುದಿಲ್ಲ. ನ್ಯಾಯಾಲಯದ ಮುಂದಿರುವ ಆರೋಪಿತರನ್ನು ಈ ಹಿಂದೆ ನೋಡಿರುವುದಿಲ್ಲ. ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ ಮತ್ತು ಪೊಲೀಸರ ಸಮಕ್ಷಮ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕರು ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿದ್ದು ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿಸಿದೆ)

**ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ**

ದಿಃ21.01.2024ರಂದು ನಾನು ಹಾಗೂ ಚಾಸಾ-2ರವರು ಬಸ್ ನಿಲ್ದಾಣದ ಬಳಿ ಇರುವಾಗ, ಪೊಲೀಸರು ಠಾಣೆಗೆ ಕರೆಯಿಸಿಕೊಂಡು ಈ ಪ್ರಕಣದ ಬಗ್ಗೆ ಮಾಹಿತಿ ನೀಡಿ ಪಂಚರಾಗಿ ಬರಲು ಕೇಳಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಂತರ ಪೊಲೀಸರು ನನ್ನನ್ನು ಹಾಗೂ ಚಾಸಾ-2ರವರನ್ನು ಕನಕಪುರ ಟೌನ್ ಹೊರ ಭಾಗದಲ್ಲಿರುವ ಅಯ್ಯಪ್ಪ ಸ್ವಾಮಿ ದೇವಸ್ಥಾನದ ಬಳಿ ಕರೆದುಕೊಂಡು ಹೋಗಿದ್ದು, ಅಲ್ಲಿ 5-6 ಆಸಾಮಿಗಳು ಒಂದು ಆಟೋ ಮತ್ತು ಕೈಗಳಲ್ಲಿ ಮಾರಕಾಸ್ತ್ರಗಳನ್ನು

ಹಿಡಿದುಕೊಂಡಿರುವುದನ್ನು ನೋಡಿ ಗಮನಿಸಿರುತ್ತೇನೆ ಎಂದರೆ ಸರಿಯಲ್ಲ. ಸದರಿ 5-6 ಆಸಾಮಿಗಳು ಅಲ್ಲಿ ಓಡಾಡುವವರನ್ನು ತಡೆದು ಅವರನ್ನು ಹೆದರಿಸಿ ಹಣ, ಒಡವೆ ಹಾಗೂ ಇನ್ನಿತರ ಬೆಲೆ ಬಾಳುವ ವಸ್ತುಗಳನ್ನು ದೋಚಿಕೊಳ್ಳುವ ಬಗ್ಗೆ ಮಾತನಾಡಿಕೊಳ್ಳುತ್ತಿರುವುದನ್ನು ಕೇಳಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿತರು ಹೊಂಚು ಹಾಕಿ ದರೋಡೆ ಮಾಡಲು ಪ್ರಯತ್ನಪಟ್ಟಿರುವುದನ್ನು ನೋಡಿರುತ್ತೇನೆ ಎಂದರೆ ಸರಿಯಲ್ಲ. ನಂತರ ಪೊಲೀಸರು ಆಸಾಮಿಗಳನ್ನು ಸುತ್ತುವರೆದು ವಶಪಡಿಸಿಕೊಂಡು ಅವರಿಂದ ಮಾರಕಾಸ್ತ್ರಗಳನ್ನು ಹಾಗೂ ಒಂದು ಆಟೋವನ್ನು ರಾತ್ರಿ 10-55 ರಿಂದ 11-55 ರವರೆಗೆ ಮಹಜರ್ ಕ್ರಮ ಜರುಗಿಸಿರುತ್ತಾರೆಂದರೆ ಸರಿಯಲ್ಲ. ಸದರಿ ದಾಳಿ ನಡೆಸುವ ಕಾಲಕ್ಕೆ ಹಾಜರಿದ್ದು ಅದರಲ್ಲಿರುವ ಅಂಶಗಳನ್ನು ಓದಿಸಿ ತಿಳಿದುಕೊಂಡು ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಈ ಮೇಲೆ ತಿಳಿಸಿದಂತೆ ದಿಃ23.01.2024ರಂದು ಪೊಲೀಸರ ಸಮಕ್ಷಮ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ತಾನು ಒಪ್ಪಿಕೊಳ್ಳದ "ನಾನು ಮೇಲ್ಕಂಡ ವಿಳಾಸದಲ್ಲಿ ವಾಸವಾಗಿರುತ್ತೇನೆ .................ಆರೋಪಿಗಳನ್ನು ಮುಂದೆ ನೋಡಿದರೆ ಗುರುತಿಸುತ್ತೇನೆ" ಎಂಬ ಹೇಳಿಕೆ ಭಾಗವನ್ನು ನಿಪಿ-2 ಎಂದು ಗುರುತಿಸಲಾಯಿತು. ನನಗೆ ಈ ಪ್ರಕರಣದ ಬಗ್ಗೆ ಸಂಪೂರ್ಣ ಮಾಹಿತಿ ತಿಳಿದಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

**<u>ಪಾಟೀ ಸವಾಲುಃ 2 ರಿಂದ 4ನೇ ಆರೋಪಿತರ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.</u>**

ಮರುವಿಚಾರಣೆ - ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ. ಎಂದು ಸಾಕ್ಷಿ ಒಪ್ಪಿರುತ್ತಾರೆ.

**(ಕುಮಾರ್.ಹೆಚ್.ಎನ್)**
2ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಮನಗರ, ಕನಕಪುರದಲ್ಲಿ.